MR. SPEAKER.—You can bring other resolution. ಮಾನ್ಯ ರಾಜಶೇಖರನ್ ಅವರು ಮತ್ತು ಶ್ರೀ ರಾಮೇಗೌಡರು ಮಾಡುತ್ತಿರುವುದು ಸರಿಯಲ್ಲ. ಆದುದರಿಂದ, ಅವರುಗಳು ತಮ್ಮ ತಮ್ಮ ಜಾಗಕ್ಕೆ ಹೋಗಿ ಕುಳಿತು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ರಾಮೇಗೌಡ.—ನಾನಿಲ್ಲೇ ನಿಂತುಕೊಂಡಿದ್ದೇನೆ.

ಅಧ್ಯಕ್ಷರು.—ತಾವೀಗ ತಯಾರಾಗುತ್ತಿದ್ದೀರಿ ತಾವು ತಮ್ಮ ಜಾಗದಲ್ಲೇ ಇರಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ರಾಮೇಗೌಡ.—ತಾವಿಷ್ಟು ಕಠಿಣ ಮನಸ್ಸಿನಿಂದ...

ಅಧ್ಯಕ್ಷರು.—ಇದು ನೆನ್ನೆ ತೀರ್ಮಾನವಲ್ಲ, ಸಭೆಯ ತೀರ್ಮಾನ. ಇದನ್ನು ಮಂತ್ರಿ ಪುನಃ ಪರಿಶೀಲನೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದರೆ ಅದನ್ನು ಮಾಡೋಣ.

ಶ್ರೀ ಜಿ. ರಾಮೇಗೌಡ.—ಈಗ ತಾವದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ನಾನು ನನ್ನ ತೀರ್ಮಾನವನ್ನು ಜಾರಿ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಅದು ತಮಗೆ ಬಿಟ್ಟಿದ್ದು.

(ಶ್ರೀ ಜಿ. ರಾಮೇಗೌಡ ಅವರು ಸಭಾಧ್ಯಕ್ಷರ ಮುಂಭಾಗದಲ್ಲಿರುವ ಅಂಗಳದಲ್ಲಿಗೆ ಬಂದು ಧರಣಿ ಕೂತರು)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳ ಕೃಪೆ ಸರಿ ಇಲ್ಲ, ದಯವಿಟ್ಟು ಅವರುಗಳು ತಮ್ಮ ತಮ್ಮ ಜಾಗಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಮತ್ತು ಅವರು ನನ್ನೊಂದಿಗೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಸಹಕರಿಸದೆ ಹೋದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೇನು ಹೊಸದಾಗಿ ಪ್ರಾರಂಭಿಸುತ್ತಿಲ್ಲ, ನಿನ್ನೆ ಕೂಡ ಈ ವಿಚಾರ ಆಯ್ತು. ವಿರೋಧ ಪಕ್ಷದ ಸದಸ್ಯರ ಬಗ್ಗೆ ಇತರ ಸದಸ್ಯರಲ್ಲಿ ಬೇರೆ ಅಭಿಪ್ರಾಯ ಕೂಡ ಇದೆ. ಆದುದರಿಂದ, ತಾವು ಈ ರೀತಿ ಮಾಡುತ್ತಿರುವುದು ಸರಿಯಲ್ಲ. ತಮ್ಮ ತಮ್ಮ ಜಾಗಗಳಿಗೆ ಹೋಗಿ ಕುಳಿತುಕೊಂಡು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಮಾನ್ಯ ರಾಮೇಗೌಡರು ಮತ್ತು ರಾಜಶೇಖರನ್ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್.—ಮೌಲ್ಯಗಳನ್ನು ಎತ್ತಿಹಿಡಿದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಆದರೆ, ಮೌಲ್ಯಗಳ ಕೊಲೆಯಾಗುತ್ತಿದೆ. ಪ್ರತಿ ನಿಮಿಷದಲ್ಲೂ, ಪ್ರತಿ ಘಳಿಗೆಯಲ್ಲೂ ಮೌಲ್ಯಗಳ ಕೊಲೆಯಾಗುತ್ತಿದೆ.

ಅಧ್ಯಕ್ಷರು.—ತಾವು ಈಗ ಮಾಡುತ್ತಿರುವುದು ಒಳ್ಳೆಯ ಮೌಲ್ಯವೋ ?

ಶ್ರೀ ಎಂ. ವಿ. ರಾಜಶೇಖರನ್.—ಇದು ಬಿಟ್ಟು ಇನ್ನಾವ ದಾರಿ ಉಳಿದಿದೆ ? ನೀವೇ ಹೇಳಿ.

MR. SPEAKER.—This is enough. You have sufficiently erred.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಒಳ್ಳೆಯ ಸ್ನೇಹಿತರು. ಆದರೆ, ದುರಾದೃಷ್ಟ, ಯಾವ ಸ್ನೇಹಿತರು ಅವರಿಗೆ ಈ ರೀತಿಯ ತಪ್ಪು ಸಲಹೆಗಳನ್ನು ಕೊಡುತ್ತಿದ್ದಾರೋ, ಗೊತ್ತಿಲ್ಲ. ಏಕೆಂದರೆ, ಇತ್ತೀಚೆಗೆ.....

ಅಧ್ಯಕ್ಷರು.—ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ನಾವು ರಾಜ್ಯಾಂಗವನ್ನು ಒಪ್ಪಿಕೊಂಡ ಮೇಲೆ ಅದರಂತೆ ನಡೆಯಬೇಕಾಗುತ್ತದೆ.

ಶ್ರೀ ಎಂ. ವಿ. ರಾಜಶೇಖರನ್.—ವಿರೋಧಪಕ್ಷದವರು ನಡೆಯಬೇಕು, ಆಡಳಿತ ಪಕ್ಷದವರೂ ನಡೆಯಬೇಕು.

ಅಧ್ಯಕ್ಷರು.—ನಾನು ಪಾದಕ್ಕೆ ತಯಾರಿಲ್ಲ. ಇಷ್ಟು ಮಾತನ್ನು ನಾನು ಈ ಸ್ಥಾನದಲ್ಲಿ ಕೂತುಕೊಂಡು ಹೇಳಬಾರದಿತ್ತು. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು